## ನಿಮ್ಮೊಡನೆ

# ಅಭಿವೃದ್ಧಿಗೆ ಅಪಘಾತಗಳ ತೊಡಕು

> ರಸ್ತೆ ಸುರಕ್ಷತೆಯ ದೃಷ್ಟಿಯಿಂದ ಕರ್ನಾಟಕದ ಸಾಧನೆ ಕೂಡ ಸಮಾಧಾನ ಮಾಡಿಕೊಳ್ಳುವಂತಿಲ್ಲ. ದೇಶದಲ್ಲಿ ಸಂಭವಿಸುವ ಅವಘಡಗಳ ಪಟ್ಟಿಯಲ್ಲಿ ರಾಜ್ಯಕ್ಕೆ ಮೂರನೇ ಸ್ಥಾನವಿದ್ದರೆ, ನಗರಗಳ ಪಟ್ಟಿಯಲ್ಲಿ ಬೆಂಗಳೂರು ಮೂರನೇ ಸ್ಥಾನ ಪಡೆದಿದೆ.

ಭಾರತದ ಅಭಿವೃದ್ಧಿಯ ಬಗ್ಗೆ ಕೇಂದ್ರ ಸರ್ಕಾರ ಭಾವುಕವಾಗಿ ಮಾತನಾಡುತ್ತಿರುವ ಸಂದರ್ಭದಲ್ಲಿ ರಸ್ತೆ ಅಪಘಾತಗಳಿಗೆ ಸಂಬಂಧಿಸಿದಂತೆ ಪ್ರಕಟವಾಗಿರುವ ಅಂಕಿಅಂಶಗಳು ನಮ್ಮ ಅಭಿವೃದ್ಧಿ ಮೀಮಾಂಸೆಯ ಟೊಳ್ಳುತನವನ್ನು ಅನಾವರಣಗೊಳಿಸುವಂತಿವೆ. 2016ರಲ್ಲಿ 4.8 ಲಕ್ಷ ರಸ್ತೆ ಅಪಘಾತಗಳು ಭಾರತದಲ್ಲಿ ಸಂಭವಿಸಿದ್ದು, ಈ ಅವಘಡಗಳಲ್ಲಿ 4.9 ಲಕ್ಷ ಮಂದಿ ಗಾಯಗೊಂಡಿದ್ದಾರೆ ಹಾಗೂ 1.5 ಲಕ್ಷ ಮಂದಿ ಸಾವಿಗೀಡಾಗಿದ್ದಾರೆ. ಈ ವಿವರಗಳನ್ನು ಬಿಡಿಸಿ ಹೇಳುವುದಾದರೆ, ಪ್ರತಿ ಗಂಟೆಗೆ 17 ಭಾರತೀಯರು ರಸ್ತೆ ಅಪಘಾತಗಳಲ್ಲಿ ಪ್ರಾಣ ಕಳೆದುಕೊಳ್ಳುತ್ತಿದ್ದಾರೆ. ರಸ್ತೆ ಅಪಘಾತಗಳು ಹಾಗೂ ಅವುಗಳಿಗೆ ಸಂಬಂಧಿಸಿದ ಅವಘಡಗಳಿಗೆ ಸಂಬಂಧಿಸಿದಂತೆ ಭಾರತ ಮೊದಲ ಸ್ಥಾನದಲ್ಲಿದೆ ಎನ್ನುವುದನ್ನು ನಮ್ಮ ಪ್ರಗತಿ ಮೀಮಾಂಸೆಯ ಹಿನ್ನೆಲೆಯಲ್ಲೇ ಗಮನಿಸಬೇಕಾಗಿದೆ.


2015ಕ್ಕೆ ಹೋಲಿಸಿದರೆ ರಸ್ತೆ ಅಪಘಾತಗಳ ಪ್ರಮಾಣ ಶೇ. 29.6ರಷ್ಟು ಹೆಚ್ಚಾಗಿದ್ದರೆ, ಸಾವಿನ ಪ್ರಮಾಣ ಶೇ.34.5ರಷ್ಟು ಹೆಚ್ಚಾಗಿದೆ. ಮೋದಿ ಸರ್ಕಾರದ ವರ್ಚಸ್ವಿ ಸಚಿವರುಗಳಲ್ಲಿ ರಸ್ತೆ ಸಾರಿಗೆ ಸಚಿವಾಲಯದ ಉಸ್ತುವಾರಿ ನಿರ್ವಹಿಸುತ್ತಿರುವ ನಿತಿನ್ ಗಡ್ಕರಿಯೂ ಒಬ್ಬರು. ಹೆದ್ದಾರಿಗಳ ಉನ್ನತೀಕರಣಕ್ಕೆ ಸಂಬಂಧಿಸಿದಂತೆ ಅವರು ಇತ್ತೀಚಿನ ದಿನಗಳಲ್ಲಿ ಸಾಕಷ್ಟು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದಾರೆ. ಆದರೆ, ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿರುವ ಅವಘಡಗಳು ರಸ್ತೆ ಸುರಕ್ಷತಾ ಕ್ರಮಗಳ ಅನುಷ್ಠಾನದಲ್ಲಿ ಲೋಪವಾಗಿರುವುದಕ್ಕೆ ಉದಾಹರಣೆಯಂತಿವೆ. ರಸ್ತೆಗಳಲ್ಲಿನ ಹೊಂಡಗಳು ಹಾಗೂ ಅವೈಜ್ಞಾನಿಕ ವೇಗತಡೆಗಳಿಂದಾಗಿಯೇ 3,396 ಸಾವುಗಳು ವರದಿಯಾಗಿವೆ. ರಸ್ತೆ ಸುರಕ್ಷತೆಗೆ ಸಂಬಂಧಿಸಿದಂತೆ ಜರೂರು ಕ್ರಮಗಳನ್ನು ಕೈಗೊಳ್ಳಬೇಕಾದ ಅಗತ್ಯವನ್ನು ಈ ಅಂಕಿಅಂಶಗಳು ಸೂಚಿಸುವಂತಿವೆ.

ಹತ್ತು ವರ್ಷಗಳ ಹಿಂದೆ ರಸ್ತೆ ಅಪಘಾತಗಳಿಂದ ಸಾವಿಗೀಡಾಗುವವರ ಸಂಖ್ಯೆ 45ಸಾವಿರದ ಆಸುಪಾಸಿನಲ್ಲಿದ್ದುದು ಈಗ ಹಲವು ಪಟ್ಟು ಹೆಚ್ಚಿದೆ. ಈ ದುರಂತಗಳಲ್ಲಿ ಸಾವಿಗೀಡಾಗುತ್ತಿರುವವರಲ್ಲಿ ವಿದ್ಯಾರ್ಥಿಗಳು ಹಾಗೂ ಯುವಕರ ಸಂಖ್ಯೆ ಗಣನೀಯ ಪ್ರಮಾಣದಲ್ಲಿದೆ. ರಸ್ತೆ ಅಪಘಾತಗಳ ಹೆಚ್ಚಳ ದೇಶದ ಪ್ರಗತಿಗೆ ಮಾರಕ ಎನ್ನುವುದನ್ನು 'ವಿಶ್ವ ಆರೋಗ್ಯ ಸಂಸ್ಥೆ' ಒತ್ತಿಹೇಳಿದೆ. ವಿಶ್ವದ ವಿವಿಧ ಭಾಗಗಳಲ್ಲಿ ಪ್ರತಿ ವರ್ಷ ಹನ್ನೆರಡೂವರೆ ಲಕ್ಷಕ್ಕೂ ಹೆಚ್ಚು ಮಂದಿ ರಸ್ತೆ ಅವಘಡಗಳಿಗೆ ಬಲಿಯಾಗುತ್ತಿದ್ದಾರೆ. ಈ ದುರಂತಗಳಿಗೆ ಒಳಗಾಗುವವರಲ್ಲಿ ಹಿಂದುಳಿದ ಹಾಗೂ ಅಭಿವೃದ್ಧಿಶೀಲ ದೇಶಗಳ ಜನರೇ ಹೆಚ್ಚು. ಮೂಲಭೂತ ಸೌಕರ್ಯಗಳ ಕೊರತೆಯಿದ್ದರೂ ವಿಶ್ವದ ಶೇ. 54ರಷ್ಟು ವಾಹನಗಳನ್ನು ಈ ದೇಶಗಳೇ ಹೊಂದಿವೆ ಎನ್ನುವುದನ್ನು ವಿಶ್ವಸಂಸ್ಥೆ ಗುರ್ತಿಸಿದೆ.

ರಸ್ತೆ ಸುರಕ್ಷತೆಯ ದೃಷ್ಟಿಯಿಂದ ಕರ್ನಾಟಕದ ಸಾಧನೆ ಕೂಡ ಸಮಾಧಾನಪಟ್ಟುಕೊಳ್ಳುವಂತಿಲ್ಲ. ದೇಶದಲ್ಲಿ ಸಂಭವಿಸುವ ಅವಘಡಗಳ ಪಟ್ಟಿಯಲ್ಲಿ ರಾಜ್ಯಕ್ಕೆ ಮೂರನೇ ಸ್ಥಾನವಿದ್ದರೆ, ನಗರಗಳ ಪಟ್ಟಿಯಲ್ಲಿ ಬೆಂಗಳೂರು ಮೂರನೇ ಸ್ಥಾನ ಪಡೆದಿದೆ. ಕಳೆದ ಹತ್ತು ವರ್ಷಗಳಲ್ಲಿ ಬೆಂಗಳೂರಿನಲ್ಲಿನ ವಾಹನಗಳ ಸಂಖ್ಯೆ ಎರಡು ಮೂರು ಪಟ್ಟು ಹೆಚ್ಚಾಗಿದೆ. ಈ ಉಬ್ಬರಕ್ಕೆ ತಕ್ಕಂತೆ ರಸ್ತೆಗಳ ಸುಧಾರಣೆಯಾಗಿಲ್ಲ. ಮಳೆಗಾಲದಲ್ಲಂತೂ ರಸ್ತೆಗಳಿಗೂ ಚರಂಡಿಗಳಿಗೂ ವ್ಯತ್ಯಾಸವೇ ಸ್ಪಷ್ಟವಾಗದ ದುಸ್ಥಿತಿ ನಗರದಲ್ಲಿದೆ.

ಅಪಘಾತಕ್ಕೆ ಒಳಗಾದವರಿಗೆ ತುರ್ತು ಚಿಕಿತ್ಸೆ ಒದಗಿಸುವ ನಿಟ್ಟಿನಲ್ಲಿ ಸವಲತ್ತುಗಳನ್ನು ಕಲ್ಪಿಸುವುದಕ್ಕೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಮೊದಲ ಆದ್ಯತೆ ನೀಡಬೇಕಾಗಿದೆ. ಅಪಘಾತ ಸಂಭವಿಸಿದ 50 ಕಿಮೀ ಫಾಸಲೆಯಲ್ಲಿ ಉತ್ತಮ ಚಿಕಿತ್ಸೆ ದೊರೆಯುವಂತೆ ನೋಡಿಕೊಳ್ಳುವುದು ಅಗತ್ಯ. ಅಪಘಾತಕ್ಕೆ ಒಳಗಾದವರನ್ನು ತಕ್ಷಣ ಆಸ್ಪತ್ರೆಗೆ ಸೇರಿಸುವಂತೆ ಸಾರ್ವಜನಿಕ ಜವಾಬ್ದಾರಿಯನ್ನು ರೂಪಿಸುವ ಕೆಲಸ ಶಾಲಾಮಟ್ಟದಲ್ಲೇ ನಡೆಯಬೇಕಾಗಿದೆ. ದೇಶದ ವಿವಿಧ ಭಾಗಗಳಲ್ಲಿನ 789 ಸ್ಥಳಗಳನ್ನು ಹೆಚ್ಚು ಅಪಘಾತಗಳು ಸಂಭವಿಸುವ ಕೇಂದ್ರಗಳನ್ನಾಗಿ ಗುರ್ತಿಸಲಾಗಿದ್ದು, ಅವುಗಳಲ್ಲಿ ಕೇವಲ 140 ಸ್ಥಳಗಳಲ್ಲಿನ ಸಮಸ್ಯೆಗಳನ್ನು ಬಗೆಹರಿಸಲು ಮಾತ್ರ ಈವರೆಗೆ ಸಾಧ್ಯವಾಗಿದೆ. ಕಪ್ಪುಪಟ್ಟಿಯಲ್ಲಿರುವ ಈ ಸ್ಥಳಗಳನ್ನು ಕಳಂಕಮುಕ್ತಗೊಳಿಸುವ ಜವಾಬ್ದಾರಿಯನ್ನು ವ್ಯವಸ್ಥೆಯ ಜೊತೆಗೆ ಜನರೂ ಹೊರಬೇಕಿದೆ. ಅಪಘಾತಗಳಲ್ಲಿ ಸಾವಿಗೀಡಾಗುವವರಲ್ಲಿ ದ್ವಿಚಕ್ರ ಸವಾರರ ಸಂಖ್ಯೆ ಹೆಚ್ಚು (ಶೇ. 34.8). ಸಾರ್ವಜನಿಕ ಸಾರಿಗೆಯನ್ನು ಹೆಚ್ಚು ಬಲಪಡಿಸುವ ಮೂಲಕ ಇವರಲ್ಲಿ ದ್ವಿಚಕ್ರ ವಾಹನಗಳ ಅವಲಂಬನೆಯನ್ನು ಕಡಿಮೆಗೊಳಿಸಲು ಪ್ರಯತ್ನಿಸಬಹುದಾಗಿದೆ.

ಅತ್ಯುತ್ತಮ ರಸ್ತೆಗಳನ್ನು, ವಿಶೇಷವಾಗಿ ಹೆದ್ದಾರಿಗಳನ್ನು ಅಭಿವೃದ್ಧಿಯ ಮಾದರಿಗಳಾಗಿ ಬಿಂಬಿಸುತ್ತೇವೆ. ವಾಹನಗಳ ಗುಣಮಟ್ಟದಲ್ಲೂ ಸಾಕಷ್ಟು ಸುಧಾರಣೆಯಾಗಿರುವ ಸಂದರ್ಭವಿದು. ಬದಲಾಗದೆ ಉಳಿದಿರುವುದು ನಮ್ಮ ಮನಸ್ಥಿತಿ ಮಾತ್ರ. ರಸ್ತೆಗಳು ಹಾಗೂ ವಾಹನಗಳನ್ನು ನಿರ್ಮಿಸುವುದಕ್ಕೆ ನೀಡುವುದಕ್ಕಿಂತಲೂ ಹೆಚ್ಚಿನ ಮಹತ್ವವನ್ನು ವಾಹನ ಸವಾರರಲ್ಲಿ 'ರಸ್ತೆ ಪ್ರಜ್ಞೆ' ಮೂಡಿಸುವುದಕ್ಕೆ ನೀಡಬೇಕಾಗಿದೆ. 'ಅಪಘಾತಗಳ ಭಾರತ' ಎನ್ನುವುದು 'ಆಧುನಿಕ ಭಾರತ'ಕ್ಕೆ ಪರ್ಯಾಯವಾಗಬಾರದು.



ಈಶ್ವರ್

■ ರಘುನಾಥ ಚ.ಹ.